ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಚುಂಚನ ಕಟ್ಟೆಯಲ್ಲಿ ಪ್ರವಾಸಿ ಕೇಂದ್ರ ಸ್ಥಾಪನೆ

311 (822) ಶ್ರೀ ಕೆ. ಎಸ್. ಕಾಳಮರಿಗೌಡ (ಪಿರಿಯಾಪಟ್ಟಣ) —ವಾರ್ತೆ ಹಾಗೂ ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೆ ಆರ್. ನಗರ ತಾಲೂಕಿನ ಚುಂಚನಕಟ್ಟಿಗೆ ಮಾನ್ಯ ಮಂತ್ರಿಗಳು ಹಿರಿದೆ ಬಂದಿದ್ದಾಗ ಚುಂಚನ ಕಟ್ಟೆಯನ್ನು ಪ್ರವಾಸಿ ಕೇಂದ್ರವಾಗಿ ಮಾರ್ಪಾಡು ಮಾಡುವುದಾಗಿ ಸಾರ್ವಜನಿಕರಿಗೆ ಭರವಸೆ ನೀಡಿದು ನಿಜವೇ ;

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರವನರು ಕೈಗೊಂಡ ಕ್ರಮಗಳೇನು ?

ಶ್ರೀ ರಘುಪತಿ ವಾರ್ತಾ ಮತ್ತು ಪ್ರಚಾರ ಮಂತ್ರಿಗಳು.—ಅ) ಹೌದು

ಆ) ಚುಂಚನ ಕಟ್ಟೆಯನ್ನು ಪ್ರವಾಸಿಕೇಂದ್ರವನ್ನಾಗಿ ಅಭಿವೃದ್ಧಿ ಪಡಿಸಲು ಪ್ರಸ್ತುತ ಆಯವ್ಯಯದಲ್ಲಿ ಅಳವಡಿಸಿಕೊಂಡಿರುವುದಿಲ್ಲ. ಆರ್ಥಿಕ ಪರಿಸ್ಥಿತಿಯು ಸುಧಾರಿಸಿದಲ್ಲಿ ಮುಂಬರುವ ವರ್ಷಗಳಲ್ಲಿ ಅಭಿವೃದ್ಧಿಪಡಿಸಲಾಗುವುದು.

ರಾಜ್ಯದಲ್ಲಿರುವ ಪ್ರವಾಸಿ ಬಸ್ಸುಗಳ ಪರವಾನಿಗೆಗಳನ್ನು ರದ್ದು ಪಡಿಸುವುದು

315 (908) ಶ್ರೀ ಸಿ. ಎಂ ಉದಾಸಿ (ಹಾನಗಲ್).-ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ;?

ಅ) ಪ್ರವಾಸಿ ಬಸ್ಸುಗಳಿಗೆ ನೀಡಿರುವ ಪರವಾನಗಿಗಳನ್ನು ರದ್ದುಪಡಿಸುವುದು ಸರ್ಕಾರದವರ ಧೋರಣೆಯಾಗಿರುವುದು ನಿಜವೆ ;

ಆ) ಮೆಟಡೋರ್ ಮತ್ತು ಸ್ಟ್ಯಾಂಡರ್ಡ್ 20 ಮಿನಿ ಬಸ್ಸುಗಳು, ಸಾರ್ವಜನಿಕ ವಾಹನ ಪಬ್ಲಿಕ್ ಕ್ಯಾರೀರ್) ಗಳಿಗೆ ಪ್ರವಾಸಿ ಪರವಾನಗಿ ಕೊಡುವಾಗ 13 ಜನರಿಗೆ ಪರವಾನಿ ಕೊಡುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ;

ಇ) ಉತ್ತರ ಕರ್ನಾಟಕದ ಎಷ್ಟು ಪಟ್ಟಣಗಳಲ್ಲಿ ಬಸ್ಸುಗಳಲ್ಲಿ ಭಾಂಗಿ (ಪಾರ್ಸಲ) ಸಾಗಣಿಕೆಗೆ ಅನುಮತಿ ಕೊಡಲಾಗಿದೆ ಹಾಗೂ ಬೆಂಗಳೂರಿನಲ್ಲಿ ಈ ಅನುಕೂಲತೆಯನ್ನು ಕಲ್ಪಿಸಲಾಗಿದೆಯೆ ?

ಶ್ರೀ ಎಂ. ಪಿ. ಪ್ರಕಾಶ್ (ರಾಜ್ಯಸಾರಿಗೆ ಸಚಿವರು.—ಅ) ಇಲ್ಲ.

ಆ) ಇಲ್ಲ.

ಇ) ಬಸ್ಸುಗಳಲ್ಲಿ ಭಾಂಗಿ (ಪಾರ್ಸಲ್) ಸಾಗಣಿಕೆಗೆ ಅನುಮತಿ ಕೊಡಲು ಮೋಟಾರು ವಾಹನ ಕಾಯಿದೆ 1939 ಅಥವಾ ಅದರ ಪ್ರಕಾರ ರಚಿಸಿರುವ ನಿಯಮಾವಳಿಗಳ ಪ್ರಕಾರ ಅವಕಾಶವಿಲ್ಲ. ಆದರೆ ಪ್ರಯಾಣಿಕರು ಬಸ್ಸುಗಳಲ್ಲಿ ತಮ್ಮ ವೈಯುಕ್ತಿಕ ಸರಕುಗಳನ್ನು ಕೊಂಡಯ್ಯಬಹುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಸಭೆಯ ಮುಂದಿಡುತ್ತೇನೆ.

ರಾಜ್ಯದ ಪತ್ರಕರ್ತರಿಗೆ ಬಸ್ ಪ್ರಯಾಣದಲ್ಲಿ ಶೇಕಡಾ 50 ರಷ್ಟು ರಿಯಾತಿ ನೀಡುವುದು.

267 (813) ಡಾ॥ ವಿ. ಎಸ್. ಆಚಾರ್ (ಉಡುಪಿ), ಮಾನ್ಯ ಪ್ರಚಾರ, ವಾರ್ತಾ ಹಾಗೂ ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೋ ;

ಅ) ಪತ್ರಕರ್ತರು ಕರ್ನಾಟಕದಲ್ಲಿ ಎಲ್ಲೇ ಪ್ರಯಾಣ ಮಾಡಿದರೂ ಶೇ 50 ವಿನಾಯಿತಿ ಪಡೆಯುವ ರೆಂದು ಸರ್ಕಾರ ಘೋಷಣೆ ಮಾಡಿರುವುದು ನಿಜವೇ ;

ಆ) ಗ್ರಾಮಾಂತರ ಮಟ್ಟದಲ್ಲಿ ಈ ರಿಯಾಯಿತಿ ಇನ್ನೂ ಪತ್ರಕರ್ತರಿಗೆ ದೊರೆಯದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಮೇಲಿನ ರಿಯಾಯಿತಿಗಳನ್ನು ಗ್ರಾಮಾಂತರ ಮಟ್ಟದಲ್ಲಿ ತಕ್ಷಣ ಜಾರಿಗೊಳಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ;

ಶ್ರೀ ಎಂ. ರಘುಪತಿ (ಪ್ರಚಾರ ಮತ್ತು ವಾರ್ತಾ ಹಾಗೂ ಪ್ರವಾಸೋದ್ಯಮ ಸಚಿವರು).--

ಅ) ಮಾನ್ಯತೆ ಪಡೆದ ಪತ್ರಕರ್ತರು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳಲ್ಲಿ ಶೇ 50 ರ ರಿಯಾಯಿತಿಯಲ್ಲಿ ಪ್ರಯಾಣ ಮಾಡುವ ಸೌಲಭ್ಯ ಸರ್ಕಾರ ಘೋಷಿಸಿದೆ.

ಆ) ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿ ಮಾನ್ಯತೆ ಪಡೆದ ಪತ್ರಕರ್ತರೂ ಈ ಸೌಲಭ್ಯಕ್ಕೆ ಅರ್ಹರಾಗಿರುವರು.

ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಅಧ್ಯಕ್ಷರು --ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಅಧ್ಯಕ್ಷರು.--ಮಾನ್ಯ ಸದಸ್ಯರಾದ ನಡಾಫ್ ಅವರು ಗಮನಸೆಳೆಯುವ ಸೂಚನೆಯನ್ನು 2 ಭಾಗ ಮಾಡಿದ್ದಾರೆ, ಕಾರಣ ಒಂದು ವಿಷಯಕ್ಕೆ ಸಂಬಂಧಪಟ್ಟ ಮಂತ್ರಿಗಳು ಇದ್ದಾರೆ ಇನ್ನೊಂದು ವಿಷಯಕ್ಕೆ ಸಂಬಂಧಪಟ್ಟ ಮಂತ್ರಿಗಳು ಇಲ್ಲ. ಆದುದರಿಂದ ಒಂದು ಭಾಗ ಈಗ ತೆಗೆದುಕೊಳ್ಳೋಣ ನಂತರ ಇನ್ನೊಂದು ತೆಗೆದುಕೊಳ್ಳೋಣ.

ಶ್ರೀ ಅಬ್ದುಲ್ ನಜೀರ್ ಸಾಬ್.--ಎರಡಕ್ಕೂ ಸಂಬಂಧಪಟ್ಟ ಮಾಹಿತಿಗಳು ನನ್ನ ಹತ್ತಿರ ಇವೆ ಆದ್ದರಿಂದ ಎರಡನ್ನು ತೆಗೆದುಕೊಳ್ಳೋಣ.

ಧಾರವಾಡ ಜಿಲ್ಲೆ ಬಂಕಾಪುರ ಮತ್ತು ಕರಡಿ ಬಗ್ಗೆ ಗ್ರಾಮಗಳು ಕುಡಿಯುವ ನೀರಿನ ತೊಂದರೆ

ಶ್ರೀ ಎಂ. ಎಂ. ನಡಾಫ್.--(ಶಿಗ್ಗಾಂವ್) ಅಧ್ಯಕ್ಷರೇ ದಾವಣಗೆರೆಯ ಬಂಕಾಪುರದಲ್ಲಿ ಕುಡಿಯುವ ನೀರಿನ ತೀವ್ರ ಕೊರತೆಯ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.-- ಸನ್ಮಾನ್ಯ ಸಭಾಧ್ಯಕ್ಷರೇ ಇದು ಇಂಗ್ಲೀಷ್‌ನಲ್ಲಿದೆ, ಇದನ್ನೆ, ಕನ್ನಡಕ್ಕೆ ತರ್ಜುಮೆ ಮಾಡಿ ಹೇಳುತ್ತೇನೆ. ಕರಡಗಿ ಗ್ರಾಮದ ಒಂದು ಪ್ರಶ್ನೆಗೆ ಉತ್ತರ ತಯಾರು ಮಾಡಿಕೊಂಡು ಬಂದಿದ್ದೇನೆ. ಎರಡನೆಯದು ಬಂಕಾಪುರ ಯೋಜನೆಯದು ನನ್ನೆ ಸಾಯಂಕಾಲ ಬಂದುದರಿಂದ ಲಿಖಿತ ಮೂಲಕ ಉತ್ತರ ಕೊಡುವುದಕ್ಕೆ ಆಗಲಿಲ್ಲ. ಅದರ ಸಮಸ್ಯೆ ನನಗೆ ಗೊತ್ತಿದೆ, ಆದರೆ ಲಿಖಿತ ಮೂಲಕ ಕೊಡಲಿಲ್ಲವೆಂದು ಹೇಳಬೇಡಿ.

ಶ್ರೀ ಎಂ ಎಂ. ನಡಾಫ್ --ಮುಂದಾದರೂ ಅದರ ಬಗ್ಗೆ ಗಮನ ಕೊಡುತ್ತೀರಾ ?

ಅಧ್ಯಕ್ಷರು,--ಕರಡಗಿ ಗ್ರಾಮದ್ದು ಇರಲಿ, ಮೊದಲು ಬಂಕಾಪುರದ್ದು ಹೇಳಿ.

ಶ್ರೀ ಅಬ್ದುಲ್ ನಜೀರ್‌ಸಾಬ್.--ಅಧ್ಯಕ್ಷರೇ, ಬಂಕಾಪುರದಲ್ಲಿ ಈಗಾಗಲೇ ನಳ ಯೋಜನೆ ಇದೆ, ಕಳೆದ ಕೆಲವು ವರ್ಷಗಳಿಂದ ಬಾವಿಗಳಲ್ಲಿ ನೀರು ಬರುವುದಕ್ಕೆ ಪ್ರಾರಂಭ ಆಯಿತು. 1982-83 ರಲ್ಲಿ ಅಧ್ಯತೆ ನೋರೆಗೆ ಆ ಕೆಲಸ ಮಾಡಬೇಕಿತ್ತು ಅದರೂ ಕೂಡ ಮೂರು ಬಾವಿಗಳನ್ನು ತೆಗೆಸಲಾಗಿದೆ. ಈ ಮೂರು ಬಾವಿಗಳಲ್ಲಿ 5100 ಗ್ಯಾಲನ್ ನೀರು ಬರುತ್ತಿದೆ. ಈ ಬಾಬಿಗೆ ಎಸ್ಟಿಮೇಟ್ ತಯಾರಾಗಿದೆ, ಅಧ್ಯತೆ ಇಲ್ಲದಿದ್ದರೂ ಕೂಡ ಅನೇಕ ಸಾರಿ ಈ ಪ್ರಶ್ನೆಗಳು ಬಂದಿರುವುದರಿಂದ ಈ ವರ್ಷ ಇದನ್ನು ಮಾಡಿಕೊಡುತ್ತೇನೆಂದು ಭರವಸೆ ಕೊಡುತ್ತೇನೆ. ಇದರ ಬಗ್ಗೆ ಅಧಿಕಾರಿಗಳಿಗೆ ಆದೇಶವನ್ನು ಕೂಡ ಕೊಟ್ಟಿದ್ದೇನೆ.

ಇನ್ನು ಕರಡಗಿಯ ಬಗ್ಗೆ ಹೇಳುವುದಾದರೆ 1981-82ರಲ್ಲಿ ಈ ಯೋಜನೆ ಮಂಜೂರಾಗಿದೆ. ಈಗ 3.66 ಲಕ್ಷ ರೂಪಾಯಿಗಳ ಕೆಲಸವನ್ನು ಹೊಸಮನಿ ಎಂಬ ಕಂಟ್ರಾಕ್ಟ್‌ದಾರರಿಗೆ ವಹಿಸಲಾಗಿದೆ. ಕಂಟ್ರಾಕ್ಟ್‌ದಾರರು ಕೆಲಸಗಳನ್ನು ಪ್ರಾರಂಭಮಾಡಿದ್ದಾರೆ. 13 ಬೋರ್‌ವೆಲ್‌ಗಳಲ್ಲಿ ಈಗಾಗಲೇ 6 ಬೋರ್‌ವೆಲ್‌ಗಳಿಗೆ ಕೈಪಂಪುಗಳನ್ನು ಅಳವಡಿಸಲಾಗಿದೆ.

ಶ್ರೀ ಎಂ ಎಂ. ನಡಾಫ್.-ಸ್ವಾಮಿ, 3 ಬೋರ್‌ವೆಲ್‌ಗಳಲ್ಲಿ ಸರಿಯಾಗಿ ನೀರು ಬರುತ್ತಿಲ್ಲ, ಬಹುಶಹ ಅಧಿಕಾರಿಗಳು ಸರಿಯಾಗಿ ಮಾಹಿತಿಯನ್ನು ಕೊಟ್ಟಿಲ್ಲವೆಂದು ಕಾಣುತ್ತದೆ, ಎಂಟು, ದಿನಕ್ಕೊಮ್ಮೆ ನೀರು ಬರುತ್ತದೆ. ಈ ಹಿಂದೆ ಅಲ್ಲಿಯ ಜನರು ಏನು ತಿಳಿಸಿದಾರೆ ಎಂದರೆ ಕುಡಿಯುವ ನೀರಿಗೆ ಬಹಳ ತೀವ್ರ ಅಭಾವವಿದೆ ಎಂದು 1982-83ರಲ್ಲಿ ಇದು ಸ್ಯಾಂಕ್ಷನ್ ಆಗಿದ್ದರೂ ಇನ್ನು ಕಾರ್ಯಗತ ಆಗಿಲ್ಲ. ಆದುದರಿಂದ ಮತ್ತೊಮ್ಮೆ ತಮ್ಮ ಜ್ಞಾಪಕಕ್ಕೆ ತರುತ್ತಿದ್ದೇನೆ. ಕೆಲವು ಕಡೆ ಈ ಬಗ್ಗೆ ಏನು ತೊಂದರೆ ಇವೆ ಅದನ್ನು ನಿವಾರಿಸುವುದಕ್ಕೆ ಅದಷ್ಟು ಜಾಗ್ರತೆ ತೆಗೆದುಕೊಂಡು ಕಾರ್ಯಾಚರಣೆ ಮಾಡುತ್ತೀರಾ ;